"ಇದು ನಿಮಗೆ ಎಲ್ಲಿ ಸಿಕ್ಕಿತು?" ಕೊನೆಗೆ ಅವನು ಕೇಳಿದ.

"ಇದು ನಿಮ್ಮ ಕೈಗವಸೇ ಮಿಸ್ಟರ್?"

ಪಾರ್ಕರ್ ಗುರುತಿಸಲು ಮೆದುಳನ್ನು ಚುರುಕುಗೊಳಿಸಿದ.

"ಅಲ್ಲ, ಇದು ನನ್ನದಲ್ಲ" ಅವನು ದೃಢವಾಗಿ ಹೇಳಿದ.

"ಮತ್ತೆ, ಈ ಸಿಗರೇಟ್ ಪೆಟ್ಟಿಗೆ ನಿಮ್ಮದೇ?"

"ಖಂಡಿತವಾಗಿಯೂ ಅಲ್ಲ. ನನ್ನದು ಬೆಳ್ಳಿಯ ಸಿಗರೇಟ್ ಪೆಟ್ಟಿಗೆ."

"ಒಳ್ಳೆಯದು, ನಾನು ಈ ಸಂಗತಿಯನ್ನು ಪೊಲೀಸರಿಗೆ ತಿಳಿಸುತ್ತೇನೆ."

"ಹೌದೇ? ನಾನು ನಿಮ್ಮ ಸ್ಥಾನದಲ್ಲಿದ್ದರೆ ಅದನ್ನು ಖಂಡಿತವಾಗಿಯೂ ಮಾಡುತ್ತಿರಲಿಲ್ಲ" ಎಂದ ಪಾರ್ಕರ್ ಕಿರುಚಿದ, "ಪೊಲೀಸರೆಂದರೆ ದಯೆ ಇಲ್ಲದವರು. ನೀವು ಸ್ವಲ್ಪ ನಿಲ್ಲಿ. ನಾನು ಒಂದು ಸುತ್ತು ಹೊರಗೆ ಹೋಗಿ ಬರುತ್ತೇನೆ. ಹಾಗೆಯೇ ಹಾರ್ಡ್‌ಮನ್‌ರನ್ನು ನೋಡಿಕೊಂಡು ಬರುತ್ತೇನೆ. ಇಲ್ಲಿ ನೋಡಿ, ಸ್ವಲ್ಪ ನಿಲ್ಲಿ" ಎಂದ ಪಾರ್ಕರ್. ಅವನು ಹೇಳುತ್ತಿರುವುದನ್ನು ನೋಡಿದರೆ, ಪೈರೆಟ್ ಸರಿಯಾದ ಕಡೆಗೆ ಗುರಿಯಿಟ್ಟಿದ್ದಾನೆ.

"ನಾವು ಅವನಿಗೆ ಆಲೋಚನೆ ಮಾಡಲು ಕಾಲಾವಕಾಶ ಕೊಟ್ಟ ಹಾಗಾಯ್ತಲ್ಲವೇ? ನಾಳೆ ಏನಾಗುತ್ತದೆ ಎಂದು ಗಮನಿಸೋಣ" ಎಂದು ಪೈರೆಟ್ ಪ್ರಸನ್ನವದನನಾಗಿ ಹೇಳಿದ.

ನಾವು ಹಾರ್ಡ್‌ಮನ್ ಕೇಸ್ ಅನ್ನು ನಾಳೆ ಮಧ್ಯಾಹ್ನಕ್ಕೆಂದು ನಿಗದಿಪಡಿಸಿದೆವು. ಅಷ್ಟರಲ್ಲಿಯೇ, ಯಾವುದೇ ಸೂಚನೆಗಳಿಲ್ಲದೆ ಬಾಗಿಲು ತಟ್ಟನೆ ತೆರೆದು ಮನುಷ್ಯಾಕೃತಿಯೊಂದು ನಮ್ಮ ಏಕಾಂತವನ್ನು ಬಿರುಗಾಳಿಯಂತೆ ಅಲ್ಲಾಡಿಸಿತು. ಕೌಂಟೆಸ್ ವೇರ ರೊಸ್ಸಕಾಫ್‌ಳ ಉಪದ್ರವ ಕೊಡುವ ದೇಹ ಎದುರಾಯಿತು.

"ಪೈರೆಟ್ ಅಂದ್ರೆ ನೀನಾ? ಇದೇನು ಮಾಡಿದ್ದು ನೀನು? ನೀನು ಆ ತರುಣನನ್ನು ತಪ್ಪಿತಸ್ಥಂತ ಹೇಳಿದ್ಯಾ? ಇದು ಅನ್ಯಾಯ. ಇದು ದೊಡ್ಡ ಹಗರಣ ಆಗುತ್ತೆ. ನನಗೆ ಆ ತರುಣನ ಬಗ್ಗೆ ಗೊತ್ತು. ಅವನು ಮರಿಕೋಳಿ, ಆಡಿನ ಮರಿ ಇದ್ದ ಹಾಗೆ. ಅವನು ಕದಿಯಲು ಸಾಧ್ಯವೇ ಇಲ್ಲ. ಅವನೇನು ಮಾಡಿದ್ರೂ ಅದು ನನಗಾಗಿ. ಅವನ ಹತ್ತಿರ ಇದ್ದು, ಇದನ್ನೆಲ್ಲಾ ನೋಡ್ತಾ ಅವನನ್ನು ಕಸಾಯಿಖಾನೆಗೆ ಬಲಿಕೊಡ್ಬೇಕಾ?"

"ಮೇಡಂ, ಇದು ಅವನ ಸಿಗರೇಟ್ ಪೆಟ್ಟಿಗೆಯೇ ಹೇಳಿ?" ಪೈರೆಟ್ ಕಪ್ಪು ಬಣ್ಣದ ಸಿಗರೇಟ್ ಪೆಟ್ಟಿಗೆಯನ್ನು ಅವಳೆದುರಿಗೆ ಹಿಡಿದ. ಕೌಂಟೆಸ್ ಅದನ್ನು ಪರೀಕ್ಷಕ ದೃಷ್ಟಿಯಲ್ಲಿ ನೋಡಿದಳು.

"ಹೌದು, ಇದು ಅವನದ್ದೇ. ಅದು ನನಗೆ ಚೆನ್ನಾಗಿ ಗೊತ್ತು. ಇದು ಅಲ್ಲಿ ಕೋಣೆಯಲ್ಲಿ ಸಿಕ್ಕಿರಬೇಕು? ನಾವೆಲ್ಲಾ ಅಲ್ಲಿಯೇ ಇದ್ದೆವು. ನನಗನಿಸುತ್ತೆ ಅವನು ಅಲ್ಲಿ ಅದನ್ನು ಬೀಳಿಸಿರಬೇಕು."

"ಮತ್ತೆ ಈ ಕೈಗವಸು?"

"ನನಗೇನು ಗೊತ್ತು? ಒಂದು ಇನ್ನೊಂದರ ತರ ಇರುತ್ತೆ. ನನ್ನನ್ನು ತಡೆಯುವ ಪ್ರಯತ್ನ ಮಾಡಬೇಡ. ಅವನನ್ನು ಬಿಟ್ಟುಬಿಡು. ಅವನು ಸಾತ್ವಿಕ ಮನುಷ್ಯ. ನೀನು ಅವನನ್ನು ಬಿಟ್ಟರೆ ನಾನು ನನ್ನ ಆಭರಣಗಳನ್ನು ಮಾರಾಟ ಮಾಡಿ ನಿನಗೆ ತುಂಬಾ ಹಣ ಕೊಡ್ತೇನೆ."

"ಮೇಡಂ..."

"ಒಪ್ಪಿಕೊಂಡಾಯಿತಲ್ಲ, ಮತ್ತೆ? ಇಲ್ಲ... ಸಾಧ್ಯವೇ ಇಲ್ಲ. ವಾದ ಮಾಡ್ಬೇಡ. ಪಾಪದ ಹುಡುಗ! ನನ್ನ ಹತ್ರ ಬಂದು ಕಣ್ಣೀರು ಹಾಕಿದ. ನಿನ್ನನ್ನು ಬಚಾವ್ ಮಾಡ್ತೇನೇಂತ ಅವನಿಗೆ ಹೇಳಿದೆ. ನಾನು ಅವನ ಹತ್ತಿರ ಹೋಗ್ತೇನೆ. ಇದನ್ನೆಲ್ಲಾ ಈ ಕೌಂಟೆಸ್ ವೇರ ರೊಸ್ಸಕಾಫ್‌ಳಿಗೆ ಬಿಟ್ಟುಬಿಡು. ಈಗ ಎಲ್ಲಾ ಇತ್ಯರ್ಥವಾಯ್ತು. ನಾನು ಹೋಗ್ತೇನೆ."